REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 33 । ಸಂಚಿಕೆ : 22 । 2 ಸೆಪ್ಟೆಂಬರ್ 2026 । ಬುಧವಾರ । ಪುಟಗಳು : 8 । ಬೆಲೆ : 2/-

## ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಹೊಸದಾಗಿ ನೇಮಕಗೊಂಡ ಸಿಬ್ಬಂದಿಗಳಿಗೆ ಹಾಗೂ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿಯನ್ನು ದಿನಾಂಕ : 22.08.2026 ರಿಂದ 26.08.2026 ರವರೆಗೆ ಏರ್ಪಡಿಸಲಾಗಿತ್ತು

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್.ಐ.ಸಿ.ಎಂ)ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಹೊಸದಾಗಿ ನೇಮಕಗೊಂಡ ಸಿಬ್ಬಂದಿಗಳಿಗೆ ಹಾಗೂ ಅಧಿಕಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಐದು ದಿನಗಳ ಉನ್ನತ ಮಟ್ಟದ "ನಿರ್ವಹಣೆ ಅಭಿವೃದ್ಧಿ ತರಬೇತಿ" (Management Development Programme)ಯನ್ನು ಇತ್ತೀಚೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದು, ಅವುಗಳನ್ನು ಸಮರ್ಥವಾಗಿ ನಿರ್ವಹಿಸಲು ಈ ದೀರ್ಘಾವಧಿಯ ತರಬೇತಿಯನ್ನು ದಿನಾಂಕ: 22.08.2026 ರಿಂದ ದಿನಾಂಕ: 26.08.2026ರವರೆಗೆ ಒಟ್ಟು ಐದು ದಿನಗಳ ಕಾಲ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್.ಐ.ಸಿ.ಎಂ.) ನಂ.67,



ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು.

ಈ ನಿರ್ವಹಣೆ ಅಭಿವೃದ್ಧಿ ತರಬೇತಿಯನ್ನು ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ ನವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀ ಎಮ್.ಆರ್. ವೆಂಕಟೇಶ್, ವಿಶೇಷ ಆಹ್ವಾನಿತರಾದ ಶ್ರೀ ಎಣ್ಣೆಗೆರೆ ಆರ್. ವೆಂಕಟರಾಮಯ್ಯ, ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ಶ್ರೀ ಪಿ.ಎನ್. ಸುರೇಶ್ ಹಾಗೂ ಮಹಾಮಂಡಳದ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಪ್ರಭಾರ ಅಧೀಕ್ಷಕ ಶ್ರೀ ಆರ್.ಎಚ್.ಕುಮಾರ್ ರವರುಗಳು ಉಪಸ್ಥಿತರಿದ್ದರು.

## ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಹೊಸದಾಗಿ ನೇಮಕಗೊಂಡ ಸಿಬ್ಬಂದಿಗಳಿಗೆ ಹಾಗೂ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ ಶಿಬಿರದ ಸಮಾರೋಪ ಸಮಾರಂಭ





**ಬೆಂಗಳೂರು :** ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಹೊಸದಾಗಿ ನೇಮಕಗೊಂಡ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಐದು ದಿನಗಳ ನಿರ್ವಹಣಾ ಅಭಿವೃದ್ಧಿ ತರಬೇತಿ (Management Development Programme) ಶಿಬಿರದ ಸಮಾರೋಪ ಸಮಾರಂಭವು ದಿನಾಂಕ: 26.08.2026 ರಂದು ಪ್ರಾದೇಶಿಕ ಸಹಕಾರಿ ನಿರ್ವಹಣಾ ಸಂಸ್ಥೆ (ಆರ್ಐಸಿಎಂ)ಯಲ್ಲಿ ನೆರವೇರಿತು.

ಈ ಸಂದರ್ಭದಲ್ಲಿ, ಶಿಬಿರದಲ್ಲಿ ಭಾಗವಹಿಸಿದ್ದ ಅಭ್ಯರ್ಥಿಗಳಿಗೆ ಮಹಾಮಂಡಳದ ಉಪ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್.ಕಿರೇಸೂರ ಅವರು ಪ್ರಮಾಣಪತ್ರಗಳನ್ನು ವಿತರಿಸಿದರು. ಪ್ರಾದೇಶಿಕ ಸಹಕಾರಿ ನಿರ್ವಹಣಾ ಸಂಸ್ಥೆಯ ಶ್ರೀ ಪಿ.ಎನ್. ಸುರೇಶ್, ಮಹಾಮಂಡಳದ ಪ್ರಭಾರ ಅಧೀಕ್ಷಕ ಶ್ರೀ ಆರ್.ಎಚ್. ಕುಮಾರ್ ಮತ್ತು ಮಹಾಮಂಡಳದ ಅಧಿಕಾರಿ ಶ್ರೀ ರಮೇಶ್ ಎನ್. ಉಪಸ್ಥಿತರಿದ್ದರು.

2 ದಿ ಮೈಸೂರು ಕೋ- ಆಪರೇಟಿವ್ ಬ್ಯಾಂಕಿನ ವಾರ್ಷಿಕ ಮಹಾಸಭೆ
4 ದಿ ಕಾರ್ಡಮಮ್ ಮರ್ಚಂಟ್ಸ್ ಕೋ-ಆಪ್ ಬ್ಯಾಂಕಿನ 61ನೇ ವಾರ್ಷಿಕ ಮಹಾಸಭೆ
7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



## ಬದುಕಿನ ದಾರಿ ತೋರಿದ ಗುರುಗಳ ನೆನೆಯೋಣ ಆ ದಾರಿಯಲ್ಲಿ ನಡೆಯೋಣ. ನಮ್ಮ ಬದುಕನ್ನು ಸಾರ್ಥಕಗೊಳಿಸೋಣ

ಹೆತ್ತವರು ನಡೆ ಕಲಿಸಿದರೆ, ಗುರು ನುಡಿ ಕಲಿಸುತ್ತಾನೆ. ಯಾವುದೇ ವ್ಯಕ್ತಿಯ ಮುಂದೆ ಗುರಿ ಇರಬೇಕು, ಹಿಂದೆ ಗುರು ಇರಬೇಕು ಎಂದು ರಾಷ್ಟ್ರಕವಿ ಕುವೆಂಪು ಅವರು ಹೇಳುತ್ತಿದ್ದರು. ಬಾಲ್ಯದಲ್ಲಿ ಶಿಕ್ಷಣಕ್ಕೆ ಭದ್ರ ಭುನಾದಿ ಹಾಕಿ ಮಕ್ಕಳ ಮುಂದಿನ ಬದುಕನ್ನು ರೂಪಿಸುವಲ್ಲಿ ಶಿಕ್ಷಕರ ಜವಾಬ್ದಾರಿ ದೊಡ್ಡದು. ಪುಟ್ಟ ಮಗುವೊಂದು ಬೆಳೆದು ಮುಂದೆ ಸಮಾಜದಲ್ಲಿ ಉನ್ನತ ಸ್ಥಾನ ಪಡೆಯುವುದರ ಹಿಂದೆ ಶಿಕ್ಷಕರ ಪಾತ್ರ ದೊಡ್ಡದಿದೆ.

ದೊಡ್ಡವರಾದಂತೆ ಸಮಾಜದಲ್ಲಿ ನಮಗೆ ಬದುಕಿಗೆ ಬೆಳಕಿನ ದಾರಿ ತೋರುವವರು, ಸಮಾಜ ಸುಧಾರಣೆಗಳಲ್ಲಿ ತೊಡಗಿಸಿಕೊಂಡ ಮಹನಿಯರುಗಳು. ಇವರುಗಳೇ ಸಮಾಜವನ್ನು ಸರಿ ದಾರಿಯಲ್ಲಿ ನಡೆಸುವ ಗುರುಗಳಾಗಿದ್ದಾರೆ. ಅಂತಹ ಪರಂಪರೆಯೇ ನಮ್ಮಲ್ಲಿದೆ. ಬುದ್ಧ, ಬಸವ, ಗಾಂಧಿ, ರಾಮಕೃಷ್ಣ ಪರಹಂಸ ಹಾಗೂ ಅಂಬೇಡ್ಕರ್ ಸಮಾಜಕ್ಕೆ ದಾರಿ ತೋರಿದ ಗುರುಗಳಾಗಿದ್ದಾರೆ.

ಮೇಲ್ವರ್ಗದ ವರ್ಣ ನೀತಿಯಿಂದ ಕೆಳವರ್ಗದವರು ಶಿಕ್ಷಣ ವಂಚಿತರಾಗಿದ್ದ ಸಮಯದಲ್ಲೇ ನೆರೆಯ ಕೇರಳದಲ್ಲಿ ಶಿಕ್ಷಣ ಕ್ರಾಂತಿಯನ್ನು ಮಾಡಿ ಶೂದ್ರಾತಿಶೂದ್ರರಲ್ಲಿ ಅಕ್ಷರ ಪ್ರೀತಿಯನ್ನು ಹುಟ್ಟಿಸಿ, "ಕಲಿಯಿರಿ ಮತ್ತು ಕಲಿಸಿರಿ', "ಬೆಳೆಯಿರಿ ಮತ್ತು ಬೆಳೆಸಿರಿ', "ಯೋಚಿಸಿರಿ ಮತ್ತು ಯೋಜಿಸಿರಿ' ಎನ್ನುತ್ತಾ ಸಮಾಜದಲ್ಲಿ ಸಮಾನತೆಯನ್ನು ಪಡೆಯುವ ಏಕೈಕ ಸಾಧನವೆಂದರೆ ಶಿಕ್ಷಣ ಎಂದು ತಿಳಿಸಿದವರು, ವೃತ್ತಿ ಶಿಕ್ಷಣ, ವಯಸ್ಕರ ಶಿಕ್ಷಣ ಹಾಗೂ ಮಹಿಳಾ ಶಿಕ್ಷಣಕ್ಕೆ ಪ್ರಾಧಾನ್ಯವನ್ನು ನೀಡಿದರು.

ಸಮಾಜದಲ್ಲಿ ಎಲ್ಲೆಡೆ ಜಾತಿ, ಮತಭೇದಗಳು ಹೆಚ್ಚಾಗಿದ್ದ ಕಾಲದಲ್ಲಿ ನಾರಾಯಣ ಗುರು ಒಬ್ಬ ಸಮಾಜಿಕ ಸುಧಾರಕನಾಗಿ ಉದಯಿಸಿ, ಸಮಾಜದ ತಾರತಮ್ಯಗಳನ್ನು ಕಡಿಮೆಮಾಡಲು ಇಡೀ ಜೀವನವನ್ನು ಮುಡಿಪಾಗಿಟ್ಟರು. ಜಗತ್ತಿನಲ್ಲಿರುವುದು, "ಒಂದೇ ಜಾತಿ, ಒಂದೇ ಮತ ಹಾಗೂ ಒಂದೇ ದೇವರು," ಎಂಬ ಸತ್ಯವಾಕ್ಯವನು ಅವರು ಪ್ರತಿಪಾದಿಸಿದರು. ಜಾತಿ ಹುಟ್ಟಿನಿಂದ ಬರುವುದಲ್ಲ. ಒಬ್ಬ ಬದುಕುವ ರೀತಿಯಿಂದ ಬರುವುದು ಎಂದು ಹೇಳಿ, ನಿಮ್ಮನ್ನು ನೀವು ತಿದ್ದಿಕೊಳ್ಳಿ ಎಂದು ದೇವಸ್ಥಾನದಲ್ಲಿ ಕನ್ನಡಿಯನ್ನು ಸ್ಥಾಪಿಸಿ ನಮ್ಮನ್ನು ನಮಗೆ ತೋರಿಸಿದವರು ನಾರಾಯಣ ಗುರುಗಳು.

1888ರ ಶಿವರಾತ್ರಿಯ ಮಂಗಳ ಮುಹೂರ್ತದಲ್ಲಿ ಕೆಳವರ್ಗದ ಜನರನ್ನು ಸಂಘಟಿಸಿ, ತಮ್ಮ ಊರಾದ ಅರವೀಪುರಂ ಬಳಿಯ ನದಿಯಿಂದ ಕಲ್ಲೊಂದನ್ನು ಎತ್ತಿ ತಂದು ಅದನ್ನು ನದಿಯ ದಂಡೆಯ ಬಂಡೆಯೊಂದರ ಮೇಲೆ ಇರಿಸಿ, ಶಿವಧ್ಯಾನದಲ್ಲಿ ನಿರತರಾಗಿ, ಓಂ ನಮಃ ಶಿವಾಯ ಪಂಚಾಕ್ಷರಿ ಮಂತ್ರವನ್ನು ಜಪಿಸುತ್ತಾ ಅದೇ ಶಿವಲಿಂಗವೆಂದು ಪ್ರತಿಷ್ಠಾಪಿಸಿದರು. ಅಲ್ಲಿ ಎಲ್ಲ ಜಾತಿ, ಧರ್ಮಗಳ ಜನರಿಗೆ ಮುಕ್ತ ಪ್ರವೇಶ ನೀಡುವ ಮೂಲಕ ಧಾರ್ಮಿಕ–ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದರು.

ನಮ್ಮ ದೇಶದ ಎರಡನೇ ರಾಷ್ಟ್ರಪತಿಯಾಗಿದ್ದ ಡಾ. ರಾಧಾಕೃಷ್ಣನ್ ಅವರೂ ಗುರುಗಳಾಗಿದ್ದವರೆ. ತಮ್ಮ ಬದುಕಿನ್ನುದಕ್ಕೂ ಸರಳವಾಗಿ ಬದುಕಿದ್ದ ಡಾ. ರಾಧಾಕೃಷ್ಣನ್ ತಮ್ಮ ಜನ್ಮ ದಿನಾಚರಣೆ ಬದಲಿಗೆ ಶಿಕ್ಷಕ ದಿನವೆಂದು ಆಚರಿಸಲು ಸೂಚಿಸುತ್ತಾರೆ. ಹೀಗೆ ನಮ್ಮ ಬಾಲ್ಯದ ಹಾಗೂ ಬದುಕಿನ ದಾರಿ ತೋರಿದ ಗುರುಗಳ ನೆನೆಯೋಣ ಆ ದಾರಿಯಲ್ಲಿ ನಡೆಯೋಣ. ನಮ್ಮ ಬದುಕನ್ನು ಸಾರ್ಥಕಗೊಳಿಸೋಣ.

▶▶ ಎಚ್.ಕೆ. ಪಾಟೀಲ

## ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ವಾರ್ಷಿಕ ಮಹಾಸಭೆ




**ಮೈಸೂರು :** ನಗರದ ಗಾಂಧಿ ಚೌಕದಲ್ಲಿರುವ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ 2025–26ನೇ ಸಾಲಿನ 120ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಯಶಸ್ವಿಯಾಗಿ ನಡೆಸಲಾಯಿತು.

ನಗರದ ಜೆ.ಕೆ.ಮೈದಾನದ ಅಲ್ಯುಮ್ನಿ ಆಡಿಟೋರಿಯಂ ಸಭಾಂಗಣದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷ ಜೆ.ಯೋಗೇಶ್ ಅಧ್ಯಕ್ಷತೆಯಲ್ಲಿ ನಡೆಯಿತು. ಬಳಿಕ ಮಾತನಾಡಿದ ಅವರು, ಈ ಸಾರಿ ಸಭೆಯಲ್ಲಿ ನಮ್ಮ ಮೇಲೆ ನಂಬಿಕೆ ಇಟ್ಟು ಆಡಳಿತ ಮಂಡಳಿಯ ಎಲ್ಲಾ ತೀರ್ಮಾನಗಳಿಗೆ ಒಪ್ಪಿಗೆ ಸೂಚಿಸಿದ್ದಾರೆ. ಮರಣನಿಧಿಗೆ ವಂತಿಗೆ ಕೊಡದಿದ್ದವರಿಗೂ ಮರಣನಿಧಿ ಕೊಡಲು ತೀರ್ಮಾನ ಕೈಗೊಳ್ಳಲು ನಮಗೆ ಅವಕಾಶ ನೀಡಿದ್ದಾರೆ.

1 ಕೋಟಿ 30 ಲಕ್ಷ ರೂ. ಲಾಭವನ್ನು 33373 ಸದಸ್ಯರ ಉಳಿತಾಯ ಖಾತೆಗೆ ಶೇ.10 ಲಾಭಾಂಶವನ್ನು ಪ್ರತಿ ಸದಸ್ಯರಿಗೂ ನೀಡಲಾಗುತ್ತಿದೆ.

ಸಂಘದ ಸದಸ್ಯರ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿಯ 200 ಮಂದಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, 120ನೇ ವರ್ಷದ ವಾರ್ಷಿಕ ಸಭೆ ಹಿನ್ನೆಲೆಯಲ್ಲಿ 120 ಮಂದಿ ನಮ್ಮ ಸಂಘಕ್ಕೆ ನೊಂದಣಿಯಾದ ಹಿರಿಯ ಸದಸ್ಯರಿಗೂ ಸನ್ಮಾನ ಮಾಡಲಾಗಿದೆ ಎಂದರು.

ಮುಖ್ಯಕಾರ್ಯನಿರ್ವಾಹಕ ಕೆ.ಹರ್ಷಿತ್‌ಗೌಡ ಮಾತನಾಡಿ, ಬೈಲಾ ತಿದ್ದುಪಡಿ, ಆಡಳಿತ ಮಂಡಳಿಯ ಬಜೆಟ್, ಮುಂದಿನ ವರ್ಷದಲ್ಲಿ ಕೈಗೊಳ್ಳಬಹುದಾದ ಅಭಿವೃದ್ಧಿ ಕಾರ್ಯಗಳಿಗೂ ಸದಸ್ಯರು ಅನುಮತಿ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ಉಪಾಧ್ಯಕ್ಷ ಟೆಂಟ್ ಟಿ. ರವಿ, ನಿರ್ದೇಶಕರಾದ ಎಸ್.ಬಿ.ಎಂ.ಮಂಜು, ಎನ್.ಯೋಗಾನಂದ, ಜೆ.ನಿರಂಜನ್, ಎಚ್.ಹರೀಶ್ ಕುಮಾರ್, ಆರ್.ರವಿಕುಮಾರ್, ಎಂ.ರಾಮಕೃಷ್ಣ, ಆರ್.ಸೋಮಣ್ಣ, ಕೆ.ಗಿರೀಶ್, ಸಿ.ಚಂದ್ರಶೇಖರ್, ಪಿ.ರಾಜೇಶ್ವರಿ, ಎಂ.ಪ್ರಮೀಳಾ, ವೃತ್ತಿಪರ ನಿರ್ದೇಶಕರಾದ ಎಂ.ವೈ. ರಮೇಶಗೌಡ, ಸಿ.ಎಸ್.ರಾಮಕೃಷ್ಣಯ್ಯ ಇನ್ನಿತರರು ಉಪಸ್ಥಿತರಿದ್ದರು.

## ಶ್ರೀ ಗುರುಸಿದ್ಧೇಶ್ವರ ಸಹಕಾರ ಬ್ಯಾಂಕಿನ 47ನೇ ವಾರ್ಷಿಕ ಮಹಾಸಭೆ




**ಹುಬ್ಬಳಿ :** ಹುಬ್ಬಳ್ಳಿ–ಧಾರವಾಢ ಅವಳಿ ನಗರದ ಪ್ರತಿಷ್ಠಿತ ಶ್ರೀ ಗುರುಸಿದ್ದೇಶ್ವರ ಬ್ಯಾಂಕಿನ 47ನೇ ವಾರ್ಷಿಕ ಮಹಾಸಭೆಯು ರವಿವಾರ ದಿನಾಂಕ : 23.08.2026 ರಂದು ಬ್ಯಾಂಕಿನ ಶ್ರೀ ಶ್ರೀ ಶ್ರೀ ಮಹಾಂತ ಅಪ್ಪಗಳ ಸಭಾಭವನದಲ್ಲಿ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಡಾ. ಗುರುಸಿದ್ದರಾಜಯೋಗಿಂದ್ರ ಮಹಾಸ್ವಾಮಿಗಳ ಸನ್ನಿದಿಯಲ್ಲಿ ಜರುಗಿತು.

ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಶಂಕರಣ್ಣ ಮುನವಳ್ಳಿ, ಉಪಾಧ್ಯಕ್ಷರಾದ ಶ್ರೀ ಅರವಿಂದ ಲಿಂಬಿಕಾಯಿ ಹಾಗೂ ಆಡಳಿತ ಮಂಡಳಿಯ ನಿರ್ದೇಶಕರಾದ ಶ್ರೀ ವೀರಣ್ಣ ಕಲ್ಲೂರ, ಶ್ರೀ ಎಫ್.ಸಿ. ಭೂಸದ, ಶ್ರೀ ಮಾರುತಿ ಜಾಧವ, ಶ್ರೀ ಮಹೇಶ ಟೆಂಗಿನಕಾಯಿ, ಶ್ರೀ ವಿಜಯಾನಂದ ಹೊಸಕೋಟಿ, ಶ್ರೀ ಲಕ್ಷ್ಮೀಕಾಂತ ಪಾಟೀಲ, ಶ್ರೀಮತಿ ಪ್ರೇಮಾ ಆರಟ್ಟಿ, ಶ್ರೀಮತಿ ಗೀತಾ ಮುಳ್ಳಳ್ಳಿ, ಶ್ರೀ ಮಂಜುನಾಥ ಮುನವಳ್ಳಿ, ಶ್ರೀ ಉಮೇಶ ಅಪ್ಪೋಜಿ, ಶ್ರೀ ರಾಜಣ್ಣ ಬತ್ತಿ, CA ಬಸವರಾಜ ಚೆನ್ನಿ ಹಾಗೂ ವಕೀಲರಾದ ಶ್ರೀ ಗುರು ಹಿರೇಮಠ ಇವರು ಉಪಸ್ಥಿತರಿದ್ದರು. ಅಧ್ಯಕ್ಷರಾದ ಶ್ರೀ ಶಂಕರಣ್ಣ ಮುನವಳ್ಳಿಯವರು ಮಹಾಸಭೆಗೆ ಆಗಮಿಸಿದ ಶೇರುದಾರ ಸದಸ್ಯರನ್ನು ಉದ್ದೇಶಿಸಿ ಸ್ವಾಗತ ಕೋರಿದರು. ತದನಂತರ ಬ್ಯಾಂಕಿನ 2025–2026ನೇ ಸಾಲಿನ ವಾರ್ಷಿಕ ವರದಿಯನ್ನು ಮತ್ತು ಪ್ರಸ್ತುತ ವರ್ಷದ ಮಹಾಸಭೆಯ ಎಲ್ಲಾ ವಿಷಯಗಳನ್ನು ಮಹಾಸಭೆಗೆ ಮಂಡಿಸಿದರು. ಮತ್ತು ಬ್ಯಾಂಕು ಸತತವಾಗಿ ಲಾಭದಲ್ಲಿ ಇದ್ದು ಕಳೆದ ಆರು ವರ್ಷಗಳಿಂದ ಶೇ.10%ರಷ್ಟು ಡಿವಿಡೆಂಡ್ ನೀಡುತ್ತಿರುವುದನ್ನು ಈ ವರ್ಷವೂ ನೀಡಲು ಆಡಳಿತ ಮಂಡಳಿಯವರು ನಿರ್ಣಯಿಸಿರುತ್ತಾರೆ ಎಂದು ಅಧ್ಯಕ್ಷರು ತಿಳಿಸಿದರು. ಇದಕ್ಕೆ ಎಲ್ಲಾ ಸರ್ವಸದಸ್ಯರು ಒಪ್ಪಿಗೆ ನೀಡಿದರು.

ಮಹಾಸಭೆಯಲ್ಲಿ ಉತ್ತಮ ಗ್ರಾಹಕರಾದ ಶ್ರೀ ರಾಜಶೇಖರ ಹಿರೇಮಠ, ಶ್ರೀ ಗುರುಸಿದ್ದಪ್ಪ ಛಬ್ಬಿ, ಶ್ರೀ ಶಿವಶಂಕರಪ್ಪ ಕೋಕಾಟಿ, ಶ್ರೀ ರಾಜೇಂದ್ರ ಸೋಳಂಕಿ, ಶ್ರೀ ಮಹಾದೇವ ಹಬೀಬ ಇವರಿಗೆ ಸನ್ಮಾನ ಮಾಡಿದರು ಮತ್ತು ಬ್ಯಾಂಕಿನ ಶೇರುದಾರರ ಮಕ್ಕಳಾದ ತರುಣ ಬ ಬೆಲ್ಲದ, ಸುಹಾಸ್ ಸಿ. ಮಮದಾಪೂರ, ಸಮೃದ್ಧ ಬ ಚೆನ್ನಿ, ನಮ್ರತಾ ಎಮ್ ಕಮಡೊಳ್ಳಿಶೆಟ್ಟರ್ ಇವರುಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಹುಬ್ಬಳ್ಳಿ ಮೂರುಸಾವಿರ ಮಠದ ಪೂಜ್ಯ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಡಾ. ಗುರುಸಿದ್ದರಾಜಯೋಗಿಂದ್ರ ಮಹಾಸ್ವಾಮಿಗಳು, ಇವರು ಮಹಾಸಭೆಯನ್ನು ಉದ್ದೇಶಿಸಿ, ಶ್ರೀ ಗುರುಸಿದ್ದೇಶ್ವರ ಬ್ಯಾಂಕು ಲಿಂ. ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಡಾ. ಗಂಗಾಧರರಾಜಯೋಗಿಂದ್ರ ಮಹಾಸ್ವಾಮಿಗಳು, ಮೂರು ಸಾವಿರಮಠ ಹುಬ್ಬಳ್ಳಿ ಪೂಜ್ಯರಿಂದ ಪ್ರಾರಂಭವಾಗಿರುತ್ತದೆ ಎಂದು ಪೂಜ್ಯರಿಗೆ ಪ್ರಣಾಮಗಳನ್ನು ಸಲ್ಲಿಸಿದರು. ಬ್ಯಾಂಕು 47ನೇ ವರ್ಷ ಪೂರೈಸಿ, ಅರ್ಧ ಶತಮಾನದ ಹತ್ತಿರ ಇರುತ್ತದೆ. ಈ ಬ್ಯಾಂಕಿನಿಂದ ಸಾಲ ಪಡೆದುಕೊಂಡ ಗ್ರಾಹಕರು ಸಕಾಲದಲ್ಲಿ ಸರಿಯಾಗಿ ಸಾಲ ಮರುಪಾವತಿ ಮಾಡುತ್ತಿರುವುದನ್ನು ಶ್ಲಾಘಿಸಿದರು. ಮುಂಬರುವ ದಿನಗಳಲ್ಲಿ ಬ್ಯಾಂಕು ಹೆಚ್ಚಿನ ಪ್ರಗತಿ ಸಾಧಿಸಲಿ ಎಂದು ಎಲ್ಲರಿಗೂ ಶುಭ ಹಾರೈಸಿ, ಆಶೀರ್ವಚನ ನೀಡಿದರು.

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಅರವಿಂದ ಲಿಂಬಿಕಾಯಿ ಅವರು ವಂದನಾರ್ಪಣೆಯನ್ನು ಮಾಡಿದರು. ಕಾರ್ಯಕ್ರಮವನ್ನು ಬ್ಯಾಂಕಿನ ಮುಖ್ಯಕಾರ್ಯ ನಿರ್ವಾಹಣಾಧಿಕಾರಿಯಾದ ಶ್ರೀ ಜಗದೀಶ. ಎಸ್. ಕಮಡೊಳ್ಳಿ ಶೆಟ್ಟರ ನಿರೂಪಿಸಿದರು.

## ದಿನಾಂಕ: 16.09.2026ರಂದು ಮಹಾಮಂಡಳದ 61ನೇ ವಾರ್ಷಿಕ ಮಹಾಸಭೆ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ 2025–26ನೇ ಸಾಲಿನ 61ನೇ ವಾರ್ಷಿಕ ಮಹಾಸಭೆಯನ್ನು 16ನೇ ಸೆಪ್ಟೆಂಬರ್ 2026ರ ಬುಧವಾರ ಬೆಳಿಗ್ಗೆ 11.30 ಗಂಟೆಗೆ ಮಹಾಮಂಡಳದ ದಿ॥ ಕೆ.ಎಚ್. ಪಾಟೀಲ ಸಭಾಂಗಣ, ನಂ.132, ಕೆ.ಎಚ್.ರಸ್ತೆ, ಬೆಂಗಳೂರು – 560027 ಇಲ್ಲಿ ಏರ್ಪಡಿಸಲಾಗಿದೆ. ಸಭೆಗೆ ಮಹಾಮಂಡಳದ ಸದಸ್ಯ ಬ್ಯಾಂಕುಗಳ ಪ್ರತಿನಿಧಿಗಳು ಭಾಗವಹಿಸಬೇಕಾಗಿ ವಿನಂತಿ. ಒಂದು ಸದಸ್ಯ ಬ್ಯಾಂಕಿನಿಂದ ಒಬ್ಬ ಪ್ರತಿನಿಧಿಗೆ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

## ದಿ ಕಾರ್ಡಮಮ್ ಮರ್ಚಂಟ್ಸ್ ಕೋ-ಆಪ್ ಬ್ಯಾಂಕಿನ 61ನೇ ವಾರ್ಷಿಕ ಮಹಾಸಭೆ




**ಹಾವೇರಿ :** ದಿ ಕಾರ್ಡಮಮ್ ಮರ್ಚಂಟ್ಸ ಕೋ–ಆಪರೇಟಿವ್ ಬ್ಯಾಂಕ್ ಲಿ., ಹಾವೇರಿ ಇದರ ಸನ್ 2025–2026ನೇ ಸಾಲಿನ 61ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ದಿ:23–08–2026ರ ರವಿವಾರದಂದು ಬ್ಯಾಂಕಿನ ಸಭಾಂಗಣದಲ್ಲಿ ನೇರವೇರಿತು.

ಸದರಿ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ಬ್ಯಾಂಕಿನ ಚೇರಮನ್‌ರಾದ ಶ್ರೀ ಗಂಗಾಧರ. ಬಿ. ಮಳಗಿ ಇವರು ವಹಿಸಿದ್ದರು. ಸದರ ವೇದಿಕೆಯಲ್ಲಿ ಉಪಾಧ್ಯಕ್ಷರಾದ ಶ್ರೀ ಮಹಾಂತಪ್ಪ ಕೆ. ಮಾಸೂರ ಹಾಗೂ ನಿರ್ದೇಶಕರಾದ ಶ್ರೀ ಮಹಾಂತೇಶ ಸಿ.ಸುರಳಿಹಳ್ಳಿ, ಶ್ರೀ ವಿರುಪಾಕ್ಷಪ್ಪ ಜಿ. ಬಣಕಾರ, ಶ್ರೀ ಮಲ್ಲಿಕಾರ್ಜುನ ಎನ್. ಹಂದ್ರಾಳ, ಡಾ. ಶ್ರೀ ಸಿದ್ದೇಶ್ವರ ಎಲ್. ಬಾಲೇಹೊಸೂರ, ಶ್ರೀ ಅಶೋಕ ಎಸ್. ಮಾಗನೂರ, ಶ್ರೀಮತಿ ವಿದ್ಯಾವತಿ ವಿ. ಕುರಬಗೊಂಡ ಶೆಟ್ಟರ, ಶ್ರೀ ಹರ್ಷ ಎಂ.ನಾಗನೂರ, ಶ್ರೀ ರಾಜಶೇಖರ ಎಸ್. ಕುದರಿ, ಶ್ರೀ ಕುಶಾಲ ಸಿ. ನರಗುಂದ, ಶ್ರೀ ಹನುಮಂತಪ್ಪ ಆರ್. ಹೊಸಮನಿ, ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಬಸವರಾಜ ಪಿ. ಪಾಟೀಲ ಹಾಗೂ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀಮತಿ ಆಶಾ ಎಸ್. ಮಟಗೊಡ್ಲಿ ಮತ್ತು ಸಿಬ್ಬಂದಿಗಳು ಹಾಜರಿದ್ದರು.

ಬ್ಯಾಂಕು ಸನ್ 2025–2026ನೇ ಸಾಲಿನಲ್ಲಿ ರೂ. 639.54 ಲಕ್ಷಗಳಷ್ಟು ಒಟ್ಟು ವಹಿವಾಟು ನಡೆಸಿ, 56.08 ಕೋಟಿ ಠೇವಣಿ, ರೂ. 44.27 ಕೋಟಿ ಸಾಲವನ್ನು ಹೊಂದಿದ್ದು, ರೂ. 1.17 ಕೋಟಿ ನಿವ್ವಳ ಲಾಭ ಗಳಿಸಿ “ಶೂನ್ಯ” ನಿವ್ವಳ ಅನುತ್ಪಾದಕ ಸಾಲದ ಪ್ರಮಾಣದೊಂದಿಗೆ ಉತ್ತಮ ಪ್ರಗತಿ ಸಾಧಿಸಿದೆ. ಬ್ಯಾಂಕಿನ ಆಡಳಿತ ಮಂಡಳಿಯವರು ಬ್ಯಾಂಕಿನ ಸದಸ್ಯರಿಗೆ ಶೇ.15ರಷ್ಟು ಡಿವಿಡೆಂಡ್ ಪಾವತಿಸಲು ತೀರ್ಮಾನಿಸಿರುತ್ತಾರೆ. ಬ್ಯಾಂಕು ಶಾಸನಬದ್ಧ ಲೆಕ್ಕಪರಿಶೋಧನೆಯಲ್ಲಿ “ಎ” ಶ್ರೇಣಿಯನ್ನು ಪಡೆದು ಮುನ್ನಡೆಯುತ್ತಿದೆ. ಗ್ರಾಹಕರ ಸೇವೆಯನ್ನು ನೀಡುವುದರಲ್ಲಿ ಬ್ಯಾಂಕ್ ಉತ್ತಮ ಪ್ರಗತಿ ಸಾಧಿಸಿದೆ.

## ಶಿಗ್ಗಾಂವ ಅರ್ಬನ್ ಕೋ–ಆಪ್ ಬ್ಯಾಂಕಿನ 30ನೇ ವಾರ್ಷಿಕ ಮಹಾಸಭೆ





**ಶಿಗ್ಗಾಂವ :** ದಿನಾಂಕ : 22–08–2026 ರಂದು ಶಿಗ್ಗಾಂವ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಸನ್ 2025–26ನೇ ಸಾಲಿನ 30ನೇ ವಾರ್ಷಿಕ ಮಹಾಸಭೆಯು ಬ್ಯಾಂಕಿನ ಅಧ್ಯಕ್ಷರಾದ ಡಾ. ಪ್ರಭುಗೌಡ ಆರ್. ಪಾಟೀಲ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಬ್ಯಾಂಕಿನ ಅಧ್ಯಕ್ಷರು ಮಾತನಾಡಿ ಆರ್ಥಿಕ ವಲಯದ ಅಭಿವೃದ್ದಿಗೆ ಗ್ರಾಹಕರ ಸಹಕಾರ ಮುಖ್ಯವಾಗಿದೆ. ಅದರೊಂದಿಗೆ ಬ್ಯಾಂಕುಗಳು ಸಹ ಏಳ್ಗೆ ಕಾಣಲು ಸಾದ್ಯವಿದೆ. ಅದಕ್ಕೆ ಬ್ಯಾಂಕು ಮತ್ತು ಗ್ರಾಹಕರ ನಡುವಿನ ವ್ಯವಹಾರಿಕ ಸಂಬಂಧ ಉತ್ತಮವಾಗಿರಬೇಕು ಎಂದು ಹೇಳಿದರು. ಅತಿಥಿಗಳಾದ ಸೋಮಣ್ಣ ಬೇವಿನಮರದ ಗಡಿ ಪ್ರದೇಶದ ಅಭಿವೃದ್ದಿ ಪ್ರಾಧಿಕಾರದ ಅಧ್ಯಕ್ಷರು ಮಾತನಾಡಿ ಸಣ್ಣ ಬಂಡವಾಳದಿಂದ ಆರಂಭವಾದ ಬ್ಯಾಂಕು ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಕೃಷಿ ಸೇರಿದಂತೆ ವಿವಿಧ ಕ್ಷೇತ್ರದ ಜನರಿಗೆ ಸಾಲಸೌಲಭ್ಯ ನೀಡುವ ಮೂಲಕ ಸಾರ್ವಜನಿಕರಿಗೆ ಸಹಕಾರಿಯಾಗಿದೆ ಎಂದರು.

ಕಾರ್ಯಕ್ರಮದ ಪೂರ್ವದಲ್ಲಿ ವರದಿ ಸಾಲಿನಲ್ಲಿ ಮೃತರಾದ ಬ್ಯಾಂಕಿನ ಸದಸ್ಯರುಗಳಿಗೆ ಶ್ರದ್ಧಾಂಜಲಿ ಸಲ್ಲಿಸಿ 2 ನಿಮಿಷ ಮೌನ ಆಚರಿಸಲಾಯಿತು. ನಂತರ ಬ್ಯಾಂಕಿನ ಮಹಾಸಭೆಯ ವಿಷಯಗಳು ಚರ್ಚೆಯಾಗಿ ಸರ್ವಾನುಮತದಿಂದ ಅಂಗಿಕಾರಗೊಂಡವು. ಸನ್ 2025–26ನೇ ಸಾಲಿಗೆ ಶೇ.12ರಂತೆ ಡಿವಿಡೆಂಡನ್ನು ಹಂಚಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಗಿತು.

ಮಹಾಸಭೆಯಲ್ಲಿ ಸದಸ್ಯರ ಮಕ್ಕಳು ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಯಲ್ಲಿ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಭೆಯಲ್ಲಿ ಉಪಾಧ್ಯಕ್ಷ ಶ್ರೀ ಧರ್ಮಪ್ಪ ಎಫ್. ಧಾರವಾಡ ಹಾಗೂ ನಿರ್ದೇಶಕರಾದ ಶ್ರೀ ಸಿದ್ದಾರ್ಥಗೌಡ, ಹೆಚ್. ಪಾಟೀಲ, ಶ್ರೀ ಶಶಿಧರ ಎಸ್. ಸುರಗೀಮಠ, ಶ್ರೀ ಜೆ.ಸಿ. ತೊಂಡಿಹಾಳ, ಶ್ರೀ ಲೋಹಿತ.ಎಸ್.ಬುಳ್ಳಕ್ಕನವರ, ಶ್ರೀ ಅಶೋಕ ಎಸ್. ಬಂಕಾಪುರ, ಶ್ರೀ ಉಮೇಶ ಪಿ.ಗೌಳಿ, ಉಮೇಶ ಬಿ. ಗೌಳಿ, ಧೀರೇಂದ್ರ ಎಮ್. ಕುಂದಾಪುರ, ಶ್ರೀ ವಿವೇಕ ಎಮ್. ರಾಮಗೇರಿ, ಶ್ರೀ ಮಾಲತೇಶ ಎಮ್.ಯಲಿಗಾರ, ಡಾ. ಬಿ.ಹೆಚ್.ವೀರಣ್ಣ, ಶ್ರೀಮತಿ ಕಾಶವ್ವ ಬಿ. ಹಾವೇರಿ ಹಾಗೂ ಶ್ರೀಮತಿ ಚನ್ನಬಸವ್ವ ಎನ್. ಬಡ್ಡಿ ಉಪಸ್ಥಿತರಿದ್ದರು. ಬ್ಯಾಂಕ್ ಮ್ಯಾನೇಜರ್ ಶ್ರೀ ಶಿವಾನಂದ ಪಾಟೀಲರವರು ನಿರೂಪಿಸಿ ವಂದಿಸಿದರು.

# ಜನತಾ ಸಹಕಾರಿ ಬ್ಯಾಂಕಿನ 61ನೇ ವಾರ್ಷಿಕ ಮಹಾಸಭೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ

**ಬೆಂಗಳೂರು:** ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು, ಇದರ 61ನೇ ವಾರ್ಷಿಕ ಮಹಾಸಭೆಯ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳು, ಕ್ರೀಡಾಪಟುಗಳು ಹಾಗೂ ಹಿರಿಯ ನಾಗರಿಕ ಸದಸ್ಯರನ್ನು ಗೌರವಿಸುವ ಕಾರ್ಯಕ್ರಮವನ್ನು ಆಗಸ್ಟ್ 8, 2026ರಂದು ಅರ್ಥಪೂರ್ಣವಾಗಿ ಆಯೋಜಿಸಲಾಯಿತು. ಬ್ಯಾಂಕಿನ ಹಿರಿಯ ಸದಸ್ಯರ ಸೇವೆ, ಸಹಕಾರ ಮತ್ತು ಬ್ಯಾಂಕಿನ ಬೆಳವಣಿಗೆಗೆ ನೀಡಿದ ಕೊಡುಗೆಯನ್ನು ಸ್ಮರಿಸಿ ಆಗಸ್ಟ್ 8, 2026ರ ಬೆಳಿಗ್ಗೆ 75 ವರ್ಷ ಮೇಲ್ಪಟ್ಟ 125 ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು. ಅದೇ ದಿನ ಸಂಜೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಪಿಯುಸಿ ಪರೀಕ್ಷೆಯಲ್ಲಿ ಶೇ.85 ಹಾಗೂ ಅದಕ್ಕಿಂತ ಹೆಚ್ಚು ಅಂಕ ಗಳಿಸಿದ 125 ವಿದ್ಯಾರ್ಥಿಗಳು ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.85 ಹಾಗೂ ಅದಕ್ಕಿಂತ ಹೆಚ್ಚು ಅಂಕ ಗಳಿಸಿದ 68 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 193 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ರಾಜ್ಯ/ರಾಷ್ಟ್ರ ಮಟ್ಟದ ಕ್ರೀಡಾಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ 12 ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು. ಈ ಕ್ರೀಡಾಪಟುಗಳು ಈಜು, ಟೇಕ್ವಾಂಡೋ, ವಾಲಿಬಾಲ್ ಸೇರಿದಂತೆ ವಿವಿಧ ಕ್ರೀಡಾ ವಿಭಾಗಗಳಲ್ಲಿ ರಾಜ್ಯಮಟ್ಟದಲ್ಲಿ ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿಯಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಗುರುತಿಸಿ ಅವರನ್ನು ಗೌರವಿಸುವ ಮೂಲಕ ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಸಾಧನೆ ಮಾಡಲು ಪ್ರೇರಣೆ ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು.

ಪ್ರತಿಭಾ ಪುರಸ್ಕಾರ ಸಮಾರಂಭದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸಿ.ಎಲ್. ಮರಿಗೌಡ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಅಧ್ಯಕ್ಷರಾದ ಡಾ. ಸಿ.



ಸೋಮಶೇಖರ್ ಅವರು ಉಪಸ್ಥಿತರಿದ್ದರು. ಬ್ಯಾಂಕಿನ ನಿರ್ದೇಶಕ ಮಂಡಳಿಯ ಸದಸ್ಯರು, ಅಧಿಕಾರಿಗಳು, ಸಿಬ್ಬಂದಿ, ವಿದ್ಯಾರ್ಥಿಗಳು, ಪೋಷಕರು ಹಾಗೂ ಬ್ಯಾಂಕಿನ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸಿ.ಎಲ್. ಮರಿಗೌಡ ಅವರು ಬ್ಯಾಂಕಿನ ಕಾರ್ಯಕ್ಷಮತೆ ಹಾಗೂ ಆರ್ಥಿಕ ಪ್ರಗತಿಯ ಕುರಿತು ಮಾಹಿತಿ ನೀಡಿದರು. ಬ್ಯಾಂಕು ದಿನಾಂಕ : 31.03.2026ರ ಅಂತ್ಯಕ್ಕೆ ರೂ.823.45 ಕೋಟಿಗಳ ದುಡಿಯುವ ಬಂಡವಾಳ ಹೊಂದಿದ್ದು, ರೂ.647.05 ಕೋಟಿಗಳ ಠೇವಣಿ ಸಂಗ್ರಹಿಸಿದೆ ಹಾಗೂ ರೂ.441.14 ಕೋಟಿಗಳ ಸಾಲ ವಿತರಿಸಿದೆ. ಬ್ಯಾಂಕಿನ ಸಿ.ಆರ್.ಎ.ಆರ್ ಪ್ರಮಾಣ ಶೇ. 21.70 ಇರುವುದು ಬ್ಯಾಂಕಿನ ಸದೃಢತೆಯ ಸಂಕೇತವಾಗಿದೆ. ರೂ. 14.88 ಕೋಟಿಗಳ ಅನುತ್ಪಾದಕ ಸಾಲ ಹೊಂದಿದ್ದು ಶೇಕಡವಾರು 3.36 ರಷ್ಟಿರುತ್ತದೆ. ಶೇ.234 ಪ್ರಾವಿಷನ್ ಕವರೇಜ್ ರೇಷಿಯೋ ಇರುವುದರಿಂದ ಶೂನ್ಯ ನಿವ್ವಳ ಎನ್.ಪಿ.ಎ ಹೊಂದಿರುತ್ತದೆ. ಬ್ಯಾಂಕಿನ ಒಟ್ಟು ಆದಾಯ 72.74 ಕೋಟಿಗಳಾಗಿದ್ದು, ತೆರಿಗೆ ಮುನ್ನ ರೂ.14.84 ಕೋಟಿಗಳ ಲಾಭಗಳಿಸಿದೆ. ತೆರಿಗೆ ಪಾವತಿ ನಂತರ ರೂ.11.34 ಕೋಟಿಗಳ ಲಾಭ ದಾಖಲಿಸಿರುವುದರಿಂದ ಸದಸ್ಯರಿಗೆ ಶೇ.12.00 ರಷ್ಟು ಲಾಭಾಂಶವನ್ನು ನೀಡುವುದಾಗಿ ತಿಳಿಸಿದರು.

# ಶಿಕಾರಿಪುರ ಶಿವ ಸಹಕಾರಿ ಬ್ಯಾಂಕಿನ 30ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ

ದಿನಾಂಕ : 24.08.2026 ಸೋಮವಾರದಂದು ಶಿಕಾರಿಪುರದ ತೇರು ಬೀದಿಯಲ್ಲಿರುವ ಶ್ರೀ ತರಳುಬಾಳು ಜಗದ್ಗುರು ಸಮುದಾಯ ಭವನದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮಹಾದೇವ ಪಾಟೀಲ್ ಮಾರವಳ್ಳಿ ಇವರ ಘನ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಬಣೆಯಿಂದ ವಾರ್ಷಿಕ ಮಹಾಸಭೆ ಜರುಗಿತು.




ಮಹಾಸಭೆಯನ್ನು ಉದ್ದೇಶಿಸಿ ಮಾತನಾಡಿದ ಬ್ಯಾಂಕಿನ ಅಧ್ಯಕ್ಷರು ರೂ.285 ಲಕ್ಷ ಷೇರು ಬಂಡವಾಳ ಸಂಗ್ರಹಣೆ, ರೂ.382 ಲಕ್ಷ ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು, ರೂ.5178.52 ಲಕ್ಷ ಠೇವಣಿ ಹೊಂದಿರುತ್ತದೆ. ರೂ. 3810.19 ಲಕ್ಷ ಸಾಲ ಮುಂಗಡಗಳನ್ನು ನೀಡಿ ರೂ. 1570.97 ಲಕ್ಷಗಳ ಮೊತ್ತವನ್ನು ವಿವಿಧ ಬ್ಯಾಂಕಿನ ಠೇವಣಾತಿಗಳಲ್ಲಿ ತೊಡಗಿಸಿ ರೂ.48.85 ಲಕ್ಷ ನಿವ್ವಳ ಲಾಭಗಳಿಸಿ ಸತತ 30 ವರ್ಷಗಳಿಂದ 'ಎ' ಆಡಿಟ್ಟ ವರ್ಗೀಕರಣದ ಶ್ರೇಣಿಯಲ್ಲಿ ಮುಂದುವರೆದಿರುತ್ತದೆ ಮತ್ತು ಈ ವರದಿ ಸಾಲಿನಲ್ಲಿ ಶೇ.10 ಡಿವಿಡೆಂಡ್ ವಿತರಿಸಲು ತೀರ್ಮಾನಿಸಲಾಗಿದೆ ಎಂದು ಮಹಾಸಭೆಯಲ್ಲಿ ಘೋಷಿಸಿದರು. ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಜಿ.ಪಿ. ಅರವಿಂದಕುಮಾರ್ ಅವರು ಮಹಾಸಭೆಯ ಆಹ್ವಾನಪತ್ರಿಕೆಯನ್ನು ಓದಿ ದಾಖಲುಗೊಳಿಸಿ ಹಿಂದಿನ ಮಹಾಸಭೆಯ ನಡಾವಳಿ ಓದಿ ಮುಂಗಡ ಪತ್ರಕ್ಕಿಂತ ಹೆಚ್ಚುವರಿಯಾದ ಖರ್ಚುಗಳ ಬಗ್ಗೆ ಮಹಾಸಭೆಯ ಒಪ್ಪಿಗೆ ಪಡೆದು ನಡಾವಳಿಯಲ್ಲಿ ದಾಖಲಿಸಿದರು. ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಸ್. ನಾಗರಾಜ್ ಅವರು ಕಾರ್ಯಕ್ರಮ ನಿರೂಪಣೆ ನಡೆಸಿಕೊಟ್ಟರು. ಬ್ಯಾಂಕಿನ ಉಪಾಧ್ಯಕರಾದ ಶ್ರೀಮತಿ ಲೀಲಾವತಿ ಶಿವಾನಂದಪ್ಪ, ನಿರ್ದೇಶಕರಾದ ಶ್ರೀ ಕುಮಾರರವರು, ಶ್ರೀ ಮನು ಬಣಕಾರ, ಶ್ರೀ ಜಿ. ಷಣ್ಮುಖಪ್ಪ, ಶ್ರೀ ಕೆ.ಎಂ.ಪ್ರಕಾಶ್ ಶ್ರೀಮತಿ ಸಿ.ಕೆ. ಶೋಭಾ, ಶ್ರೀ ಬಿ. ಪರಮೇಶ್ವರಪ್ಪ ಮಳೂರು ಇವರುಗಳು ಮಹಾಸಭೆಯ ವಿವಿಧ ಸಭಾಕಾರ್ಯ ಸೂಚಿಯ ವಿಷಯಗಳನ್ನು ಮಹಾಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆದರು. ಬ್ಯಾಂಕಿನಲ್ಲಿ 28 ವರ್ಷಗಳ ಕಾಲ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಶ್ರೀ ಕೆ.ಆರ್.ಬಸವರಾಜಪ್ಪನವರಿಗೆ ಬ್ಯಾಂಕಿನ ಮಹಾಸಭೆಯಲ್ಲಿ ಸನ್ಮಾನ ಮಾಡಿ ಸತ್ಕರಿಸಲಾಯಿತು. ಬ್ಯಾಂಕಿನ ನಿರ್ದೇಶಕರಾದ ಶ್ರೀ ಜಿ.ಪರಮೇಶ್ವರಪ್ಪ, ಬ್ಯಾಂಕಿನ ಸಿಬ್ಬಂದಿಗಳಾದ ಶ್ರೀ ಪ್ರವೀಣ್, ಶ್ರೀ ಬಿ.ಜೆ. ವಿರೇಶ್, ಶ್ರೀ ಸಚ್ಚಿನ್ ಕೆ.ಸಿ., ಶ್ರೀ ಶರತ್ ಹೆಚ್.ಡಿ., ಶ್ರೀ ಡಿ. ತಿಮ್ಮೇಶ್ ಹಾಗೂ ಶ್ರೀ ಚರಣ್‌ರಾಜ್ ಎ.ಡಿ. ಮತ್ತು ಶ್ರೀ ಜಿ.ಬಿ. ಸುರೇಶ ಇವರುಗಳು ಹಾಜರಿದ್ದರು. ಬ್ಯಾಂಕಿನ ಅಕೌಂಟೆಂಟರಾದ ಶ್ರೀ ಅಭಿಲಾಷ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ವಾಸವಿ ಎಂಎಸ್‌ಸಿಎಂ ಕೋ-ಆಪರೇಟಿವ್ ಬ್ಯಾಂಕಿನ 59ನೇ ವಾರ್ಷಿಕ ಸರ್ವಸದಸ್ಯರ ಸಭೆ







**ಬೆಂಗಳೂರು:** ವಾಸವಿ ಎಂಎಸ್‌ಸಿಎಂ ಕೋ-ಆಪರೇಟಿವ್ ಬ್ಯಾಂಕಿನ 2025-2026ನೇ ಸಾಲಿನ 59ನೇ ವಾರ್ಷಿಕ ಸರ್ವಸದಸ್ಯರ ಸಭೆಯು ಅಧ್ಯಕ್ಷರಾದ ಶ್ರೀ ಆರ್.ಪಿ. ರವಿಶಂಕರ್‌ರವರ ಅಧ್ಯಕ್ಷತೆಯಲ್ಲಿ ದಿನಾಂಕ : 16.08.2026ರ ಭಾನುವಾರ ಬೆಳಗ್ಗೆ 10:30 ಘಂಟೆಗೆ ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಕಾವೇರಿ ಭವನದ ಎದುರು, ಬೆಂಗಳೂರು-560002 ಇಲ್ಲಿ ಜರುಗಿತು.

ಬ್ಯಾಂಕಿನಲ್ಲಿ ಸುಮಾರು 50 ವರ್ಷಗಳಿಂದ ನಿರ್ದೇಶಕರಾಗಿ ಸೇವೆ ಸಲ್ಲಿಸಿ, ಸ್ವಯಂ ನಿವೃತ್ತಿ ಪಡೆದ ಶ್ರೀ ವೈ.ಎಲ್.ಪ್ರಸಾದ್ ಹಾಗೂ ಶ್ರೀ ಎನ್.ಆರ್.ಸುರೇಂದ್ರನಾಥ್ ರವರಿಗೆ ಆಡಳಿತ ಮಂಡಳಿಯವರಿಂದ ಸನ್ಮಾನಿಸಿ, ಗೌರವಿಸಲಾಯಿತು.

## ಆಝಾದ ಬ್ಯಾಂಕಿನ 65ನೇ ವಾರ್ಷಿಕ ಸಭೆ ಶೇ.12 ಡಿವ್ಹಿಡೆಂಡ್ ಹಾಗೂ ರೂ.1.30 ಕೋಟಿ ಲಾಭ





**ಗದಗ :** ಗದುಗಿನ ಆಝಾದ್ ಕೋ-ಆಪರೇಟಿವ್ ಬ್ಯಾಂಕ್ ಪ್ರಗತಿಯಲ್ಲಿ ಮುನ್ನಡೆದಿದ್ದು ಬ್ಯಾಂಕು ಕಳೆದ ವರ್ಷಗಿಂತಲೂ ಈ ವರ್ಷ ಎಲ್ಲ ರೀತಿಯಿಂದಲೂ ಮುನ್ನಡೆ ಸಾಧಿಸಿದೆ. 2025-26ನೇ ವರ್ಷದಲ್ಲಿ 1 ಕೋಟಿ 30 ಲಕ್ಷ 60 ಸಾವಿರ ರೂ.ಲಾಭದಲ್ಲಿದ್ದು ಶೇರುದಾರರಿಗೆ ಶೇ.12 ರಷ್ಟು ಡಿವ್ಹಿಡೆಂಡ್ ನೀಡಲಿದೆ ಎಂದು ಬ್ಯಾಂಕ್ ಚೇರಮನ್ ಹಾಜಿ ಸರಫರಾಜ ಅಹ್ಮದ್ ಎಸ್. ಉಮಚಗಿ ಹೇಳಿದರು.

ಅವರು ರವಿವಾರ ಬ್ಯಾಂಕಿನ ಸಭಾಂಗಣದಲ್ಲಿ ನಡೆದ ಬ್ಯಾಂಕಿನ 65ನೇ ವಾರ್ಷಿಕ ಸಾಧಾರಣಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಬ್ಯಾಂಕ್‌ಗೆ 5,792 ಜನ ಸದಸ್ಯರಿದ್ದು 340.27 ಲಕ್ಷ ರೂ.ಶೇರು ಬಂಡವಾಳ, 114 ಕೋಟಿ 62 ಲಕ್ಷ ರೂ. ಠೇವು ಹೊಂದಿದ್ದು ಠೇವುಗಳ ಮೇಲೆ ವಿಮಾ ನಿಗಮದ ವಿಮಾ ಭದ್ರತೆ ಇದೆ. ದುಡಿಯುವ ಬಂಡವಾಳ 13157.64 ಲಕ್ಷ ರೂ. ಆಗಿದೆ. ಒಟ್ಟು ವ್ಯವಹಾರ ಶಾಖಾ ಕಚೇರಿ ಒಳಗೊಂಡು 140512.35 ಲಕ್ಷ ರೂ. ಆಗಿದೆ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕೆಸಿಸಿ ಬ್ಯಾಂಕಿನ ಮಾಜಿ ಅಧ್ಯಕ್ಷ ಹಾಗೂ ಸಹಕಾರಿ ಧುರೀಣ ಐ.ಎಸ್. ಪಾಟೀಲ ಮಾತನಾಡಿ ಸಹಕಾರಿ ಕ್ಷೇತ್ರದ ಬೆಳವಣಿಗೆಯಲ್ಲಿ ಗದಗ ಜಿಲ್ಲೆಯ ಕೊಡುಗೆ ಮಹತ್ವದ್ದಾಗಿದೆ. ಸಹಕಾರಿ ಸಂಸ್ಥೆಗಳು ಜನಸಾಮಾನ್ಯರ ಆರ್ಥಿಕ ಅಗತ್ಯಗಳಿಗೆ ಸ್ಪಂದಿಸುವ ಮೂಲಕ ಸಮಾಜದ ಅಭಿವೃದ್ಧಿಗೆ ನೆರವಾಗುತ್ತಿವೆ ಆಜಾದ್ ಬ್ಯಾಂಕಿನ ಆಡಳಿತ, ಹಣಕಾಸಿನ ಸ್ಥಿತಿ ಹಾಗೂ ಮುಂದಿನ ಯೋಜನೆಗಳನ್ನು ಷೇರುದಾರರ ಮುಂದಿಡುವ ಮೂಲಕ ಪಾರದರ್ಶಕ ಆಡಳಿತವನ್ನು ಅಭಿವ್ಯಕ್ತಿಗೊಳಿಸಿದ್ದು ಶ್ಲಾಘನೀಯ ಎಂದರು. ಬ್ಯಾಂಕಿನ ಆರ್ಥಿಕ ಆರೋಗ್ಯ ಕಾಪಾಡಲು ಪಾರದರ್ಶಕ ಆಡಳಿತ, ಪರಿಣಾಮಕಾರಿ ಸಾಲ ವಸೂಲಾತಿ ಮತ್ತು ಎನ್‌ಪಿಎ ನಿಯಂತ್ರಣಕ್ಕೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿ, ಬ್ಯಾಂಕ್ ಮತ್ತಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸಿದರು.

ಸಭೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ಷೇರುದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಮ್ಯಾನೇಜಿಂಗ್ ಡೈರೆಕ್ಟರ್ ಎ.ಜಿ.ಯರಗುಡಿ ಸ್ವಾಗತಿಸಿ, ಸಭೆಯ ಅಜೆಂಡಾದ ವಿಷಯಗಳನ್ನು ಮಂಡಿಸಿ ಮಂಜೂರ ಪಡೆದರು. ಶಾಖಾ ವ್ಯವಸ್ಥಾಪಕ ಆರ್.ಎಂ.ನದಾಫ ಲೆಕ್ಕಪರಿಶೋಧನಾ ವರದಿ ಪ್ರಸ್ತುತಪಡಿಸಿದರು, ಬ್ಯಾಂಕಿನ ನಿರ್ದೇಶಕರಾದ ಎನ್.ಬಿ.ಶಾಸ್ತ್ರೀ ಅವರು ನಿವ್ವಳ ಲಾಭ ಹಂಚಿಕೆ ವಿವರಣೆ ನೀಡಿದರು. ಪ್ರಧಾನ ಕಚೇರಿಯ ವ್ಯವಸ್ಥಾಪಕ ಯಾಸೀನ ಹುಬ್ಬಳ್ಳಿ ಅವರು ವಾರ್ಷಿಕ ಬಜೆಟ್ ಮಂಡಿಸಿ ಮಂಜೂರು ಪಡೆದರು.

ವೇದಿಕೆಯ ಮೇಲೆ ಬ್ಯಾಂಕಿನ ಉಪಾಧ್ಯಕ್ಷ ಹುಲಗಣ್ಣ ಬಳ್ಳಾರಿ, ನಿರ್ದೇಶಕರಾದ ಎನ್.ಬಿ.ಶಾಸ್ತ್ರಿ, ಆರ್.ಎಲ್.ಬಾಗಲಕೋಟ, ಎಂ.ಎ.ಹಣಗಿ, ಗುಲ್ಜಾರ್‌ಭಾನು ಮುಜಾವರ, ಯಲ್ಲಪ್ಪ ತೋಟದ, ಶ್ರೀಮತಿ ರೇಣುಕಾಬಾಯಿ ಕಲಾಲ, ಶಾನವಾಜ ಉಮಚಗಿ, ಬಿ.ಎಸ್.ಢಾಲಾಯತ, ಮಹೇಶ್ವರಯ್ಯ ಕೋಟಗುಣಶಿಮಠ, ಪರಶುರಾಮ ಪಾತ್ರೋಟ, ಎಚ್.ಎನ್.ಇಟಗಿ, ಡಾ.ಪ್ಯಾರ ಅಲಿ ನೂರಾನಿ, ಆರ್.ಕೆ.ಹಬೀಬ, ಎ.ಎಂ.ಮುಲ್ಲಾ, ಇಸೂಫ ಇಟಗಿ ಉಪಸ್ಥಿತರಿದ್ದರು. ಮಹ್ಮದ್‌ಗೌಸ್ ಜಮಾಲ ಸಾಬನವರ ಖುರಾನ ಪಠಿಸಿದರು, ಎಂ.ಎಂ.ಶಿರಹಟ್ಟಿ ನಿರೂಪಿಸಿದರು, ಎಂ.ಎ.ಹಣಗಿ ವಂದಿಸಿದರು. ಸಭೆಯಲ್ಲಿ ಶೇರುದಾರರು, ಗಣ್ಯರು ಪಾಲ್ಗೊಂಡಿದ್ದರು.




## ನಿಮ್ಮ ಪ್ರಶ್ನೆ ನಮ್ಮ ಉತ್ತರ



▶▶ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ರಿಜರ್ವ್ ಬ್ಯಾಂಕಿನ ನಿರ್ದೇಶನದಂತೆ ಪಟ್ಟಣ ಸಹಕಾರ ಬ್ಯಾಂಕಿನ ನಿರ್ದೇಶಕರು ತಮ್ಮ ಬ್ಯಾಂಕಿನಿಂದ ವೈಯಕ್ತಿಕ ಸಾಲಗಳನ್ನು ಪಡೆಯಬಹುದಾಗಿದೆ. ಬ್ಯಾಂಕು ನೀಡುವ ಸಾಲಗಳಿಗೆ ಗ್ಯಾರಂಟರ್ ಪಡೆಯುವ ಕ್ರಮವಿದೆ. ನಿರ್ದೇಶಕರಿಗೆ ನೀಡುವ ವೈಯಕ್ತಿಕ ಸಾಲಕ್ಕೆ ಬ್ಯಾಂಕಿನ ಮತ್ತೊಬ್ಬ ನಿರ್ದೇಶಕರು ಗ್ಯಾರಂಟರ್ ಆಗಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರು / ಸಂಬಂಧಪಟ್ಟ ಸಂಸ್ಥೆಗಳಿಗೆ ಸಾಲ ನೀಡಬಾರದು ಎಂಬ ನಿಷೇಧ ಇನ್ನೂ ಮುಂದುವರಿದಿದೆ. ಅದರಂತೆ ನಿರ್ದೇಶಕರು ಮತ್ತು ಅವರ ಸಂಬಂಧಿಕರು ಬ್ಯಾಂಕಿನ ಯಾವುದೇ ಸಾಲಕ್ಕೆ ಜಾಮೀನುದಾರರಾಗುವಂತಿಲ್ಲ. ಇತ್ತೀಚೆಗೆ, ರಿಜರ್ವ್ ಬ್ಯಾಂಕು ನಿರ್ದೇಶಕರಿಗೆ ಸಾಲ ನೀಡುವಲ್ಲಿರುವ ನಿರ್ದೇಶನವನ್ನು ಸ್ವಲ್ಪ ಸಡಿಲಿಸಿ, ನಿರ್ದೇಶಕರಿಗೆ ಮಾತ್ರ ಬ್ಯಾಂಕಿನ ಸಿಬ್ಬಂದಿಗೆ ನೀಡುವ ಪ್ರಮಾಣದಷ್ಟು ವೈಯಕ್ತಿಕ ಸಾಲವನ್ನು ನೀಡಬಹುದು ಎಂದು ಹೇಳಿದೆ. ಆದರೆ, ನಿರ್ದೇಶಕರು ಸಾಲಕ್ಕೆ ಜಾಮೀನುದಾರರಾಗುವಲ್ಲಿ ಇರುವ ನಿಷೇಧದಲ್ಲಿ ಯಾವುದೇ ಸಡಿಲಿಕೆ ಇಲ್ಲ. ಆದ್ದರಿಂದ, ನಿಮ್ಮ ನಿರ್ದೇಶಕರಿಗೆ ನೀಡುವ "ವೈಯಕ್ತಿಕ ಸಾಲಕ್ಕೆ" ಅವರ ಸಂಬಂಧಿಕರು ಮತ್ತು ಇತರ ನಿರ್ದೇಶಕರು / ಅವರ ಸಂಬಂಧಿಕರನ್ನು ಹೊರತುಪಡಿಸಿ ಮೂರನೇ ವ್ಯಕ್ತಿಯ ಜಾಮೀನು ಪಡೆಯಬೇಕು.

**02. ನಮ್ಮ ಬ್ಯಾಂಕಿನ 65 ವಯಸ್ಸಿನ ಒಬ್ಬ ನಿರ್ದೇಶಕರು ವೈಯಕ್ತಿಕ ಸಾಲದಡಿಯಲ್ಲಿ ಗೃಹ ನಿರ್ಮಾಣ ಸಾಲ ಪಡೆಯಬಯಸುತ್ತಾರೆ. ಅವರ ವಯಸ್ಸು 60ಮೀರಿರುವುದರಿಂದ ಅವರಿಗೆ ಗೃಹ ನಿರ್ಮಾಣ ಸಾಲವನ್ನು ನೀಡಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಮಂಗಳೂರು.**

ಉತ್ತರ: ಪಟ್ಟಣ ಸಹಕಾರ ಬ್ಯಾಂಕಿನ ನಿರ್ದೇಶಕರಿಗೆ ನೀಡುವ "ವೈಯಕ್ತಿಕ ಸಾಲ"ದ ಪ್ರಮಾಣವು ಬ್ಯಾಂಕಿನ ಸಿಬ್ಬಂದಿಗಳಿಗೆ ನೀಡಲಾಗುವ ಸಾಲದ ಗರಿಷ್ಠ ಮೊತ್ತವನ್ನು ಮೀರಬಾರದು ಮತ್ತು ಬಡ್ಡಿಯು ಸಿಬ್ಬಂದಿ ಸಾಲದ ಬಡ್ಡಿದರಕ್ಕಿಂತ ಕಡಿಮೆ ಇರಬಾರದು. ವೈಯಕ್ತಿಕ ಸಾಲ ಪಡೆಯುವ ನಿರ್ದೇಶಕರಿಗಾಗಲಿ, ಇತರೆ ಸಾಲಗಾರರಿಗಾಗಲೀ, ರಿಜರ್ವ್ ಬ್ಯಾಂಕು ಯಾವುದೇ ಗರಿಷ್ಠ ವಯಸ್ಸಿನ ಮಿತಿಯನ್ನು ನಿರ್ಧರಿಸಿಲ್ಲ. ಈ ಬಗ್ಗೆ ನೀತಿ (Policy) ತಯಾರಿಸುವ ಸ್ವಾತಂತ್ರ್ಯ ಬ್ಯಾಂಕಿಗೆ ಇದೆ.

**03. ನಮ್ಮ ಬ್ಯಾಂಕಿನ ಸಿಬ್ಬಂದಿಗೆ ರೂ.50ಲಕ್ಷದವರೆಗೆ ಗೃಹ ನಿರ್ಮಾಣ ಸಾಲ ನೀಡುತ್ತಿದ್ದೇವೆ. ಸದ್ಯಕ್ಕೆ ನಮ್ಮ ಬ್ಯಾಂಕಿನ ಸ್ವಂತ ಬಂಡವಾಳ ಋಣಾತ್ಮಕ ಆಗಿದೆ. ಹೀಗಿರುವಾಗ ನಮ್ಮ ನಿರ್ದೇಶಕರಿಗೆ ಸಿಬ್ಬಂದಿಗೆ ನೀಡುವಷ್ಟು ಪ್ರಮಾಣದಲ್ಲಿ ಗೃಹ ಸಾಲ ನೀಡಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ದಾವಣಗೆರೆ.**

**ಉತ್ತರ :** ನಿರ್ದೇಶಕರಿಗೆ ನೀಡುವ ವೈಯಕ್ತಿಕ ಸಾಲದ ಪ್ರಮಾಣವು ಸಿಬ್ಬಂದಿಗಳಿಗೆ ನೀಡುವ ಸಾಲದ ಪ್ರಮಾಣ ಅಥವಾ ಬ್ಯಾಂಕಿನ ವೈಯಕ್ತಿಕ ಸಾಲದ ಮಿತಿ (ಟೈಯರ್–1 ಬಂಡವಾಳದ ಶೇ.15ರಷ್ಟು) ಯಾವುದು ಕಡಿಮೆಯೋ ಅಷ್ಟು, ನಿಮ್ಮ ಬ್ಯಾಂಕಿನ ಟೈಯರ್–1 ಬಂಡವಾಳದ ಪ್ರಮಾಣ ಶೂನ್ಯವಾಗಿದ್ದಲ್ಲಿ ನೀವು ನಿಮ್ಮ ಸದಸ್ಯರಿಂದಾಗಲೀ, ನಿರ್ದೇಶಕರಿಗಾಗಲೀ ಠೇವಣಿ ಮೇಲಿನ ಸಾಲವನ್ನು ಹೊರತುಪಡಿಸಿ ಯಾವುದೇ ಸಾಲವನ್ನು ನೀಡುವಂತಿಲ್ಲ.

## ಜನತಾ ಸಹಕಾರಿ ಬ್ಯಾಂಕಿಗೆ ರೂ.1.20 ಕೋಟಿ ಲಾಭ

**ಹಾರೂಗೇರಿ :** ದಿನಾಂಕ : 22.08.2026ರಂದು ಹಾರೂಗೇರಿ ಜನತಾ ಸಹಕಾರ ಬ್ಯಾಂಕಿನ 49ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಬ್ಯಾಂಕಿನ ಅಧ್ಯಕ್ಷರಾದ ರಾಜಶೇಖರ ಪಾಟೀಲ ಸಣ್ಣ ಸಾಲಗಳನ್ನು ಹೆಚ್ಚೆಚ್ಚು ನೀಡುವುದರಿಂದ ಬಹಳಷ್ಟು ಜನರ ಆರ್ಥಿಕ ಪ್ರಗತಿಗೆ ಸಹಾಯವಾಗುತ್ತದೆ. ಹೀಗಾಗಿ ಆರ್ಥಿಕ ದುರ್ಬಲರು, ವ್ಯಾಪಾರಸ್ಥರು, ಸಣ್ಣ ಕೈಗಾರಿಕೆಗಳು, ನೌಕರಸ್ಥರಿಗೆ ಕಡಿಮೆ ಬಡ್ಡಿದರಗಳಲ್ಲಿ ಸಾಲ ಸೌಲಭ್ಯ ನೀಡಲಾಗುತ್ತಿದೆ ಎಂದು ಹೇಳಿದರು. ಬ್ಯಾಂಕ್ ಆಧುನಿಕ ತಾಂತ್ರಿಕತೆ ಅಳವಡಿಸಿಕೊಳ್ಳುತ್ತಿದ್ದು, 2027ರಲ್ಲಿ ಸುವರ್ಣ ಮಹೋತ್ಸವವನ್ನು ಸರಳವಾಗಿ, ಅರ್ಥ ಪೂರ್ಣವಾಗಿ ಆಚರಿಸಲಾಗುವುದು ಎಂದು ಅವರು ಹೇಳಿದರು.

ವೃತ್ತಿಪರ ನಿರ್ದೇಶಕ ಸಿ.ಡಿ. ಮುಂಗುರವಾಡಿ, ಆಡಳಿತ ವ್ಯವಸ್ಥಾಪನಾ ಸಮಿತಿ ಸದಸ್ಯ ಡಾ. ಸಿ.ಆರ್.ಗುಡಸಿ ಮಾತನಾಡಿದರು. ಪ್ರಧಾನ ವ್ಯವಸ್ಥಾಪಕ ಎಸ್.ಎಸ್. ಅಮರಶೆಟ್ಟಿ ವರದಿ ವಾಚಿಸಿ, 4790 ಸದಸ್ಯರು, 233.25 ಕೋಟಿ ರೂ. ದುಡಿಯುವ ಬಂಡವಾಳ ಹೊಂದಿದೆ. 204.30 ಕೋಟಿ ರೂ. ಠೇವು ಸಂಗ್ರಹಿಸಿದ್ದು, 118 ಕೋಟಿ ರೂ. ಸಾಲ ವಿತರಿಸಲಾಗಿದೆ. 2025–26ನೇ ಆರ್ಥಿಕ ವರ್ಷಕ್ಕೆ 1.20 ಕೋಟಿ ರೂ. ನಿವ್ವಳ ಲಾಭಗಳಿಸಿದೆ ಎಂದರು.

ಅಮೃತಾ ಮುಂಗುರವಾಡಿ, ಮಂಜುನಾಥ ಕಶೆಟ್ಟಿ, ಸಂತೋಷ ತೇಲಿ,




ಆರ್.ಟಿ. ನಾಗರಾಳೆ, ಹನುಮವ್ವ ಮಾದರ ಅವರನ್ನು ನೂತನ ನಿರ್ದೇಶಕರನ್ನಾಗಿ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷ ತಮ್ಮಣ್ಣಪ್ಪ ತೇಲಿ, ನಿರ್ದೇಶಕ ಪ್ರಕಾಶ ಕಶೆಟ್ಟಿ, ಬೆಳಗಾವಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಸಂಜೀವ ಅವಕ್ಕನವರ, ಶಂಕರ ಮಾನಶೆಟ್ಟಿ, ಪ್ರಭುಲಿಂಗ ಪಾಲಬಾವಿ, ಭೀಮಗೊಂಡ ಕರ್ಣವಾಡಿ, ಹನುಮಂತ ಮಡಿವಾಳ, ರಾಮಪ್ಪ ನಾಯಿಕ, ಬಸಗೌಡ ಪಾಟೀಲ, ಜಯಶ್ರೀ ಪಾಟೀಲ, ಕಲ್ಪನಾ ಮದಾರ, ಶಾಖಾ ವ್ಯವಸ್ಥಾಪಕರು, ನಾನಾ ಶಾಖೆಗಳ ಸಿಬ್ಬಂದಿ ಹಾಗೂ ಸದಸ್ಯರು ಇದ್ದರು. ಆನಂದ ಗುರವ ಸ್ವಾಗತಿಸಿದರು. ಡಿ.ಬಿ. ಅಂಬಿ ನಿರೂಪಿಸಿದರು ಹಾಗೂ ಬಿ.ಕೆ. ಕೊಕಟನೂರ ವಂದಿಸಿದರು.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಟಿಬೆಟ್‌ನಿಂದ ಆರಂಭವಾಗಿ ನೇಪಾಳದಲ್ಲಿ ಸಂಭವಿಸಿದ ಭೀಕರ ಹಠಾತ್ ಪ್ರವಾಹದಲ್ಲಿ ಮೃತಪಟ್ಟವರ ಸಂಖ್ಯೆ 600ಕ್ಕೆ ಏರಿಕೆಯಾಗಿದ್ದು ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ. ಇನ್ನೂ ಸಾವಿರಾರು ಮಂದಿ ನಾಪತ್ತೆಯಾಗಿದ್ದು, ಅವರಲ್ಲಿ 288 ಭಾರತೀಯರು ಸೇರಿದ್ದಾರೆ. ಮಧ್ಯ ಇದೇ ವೇಳೆ ಈ ದುರಂತದ ನಂತರ 2,000ಕ್ಕೂ ಹೆಚ್ಚು ಜನರು ನಾಪತ್ತೆಯಾಗಿದ್ದು, ರಕ್ಷಣಾ ತಂಡಗಳು ಹೆಚ್ಚಿನ ಮೃತದೇಹಗಳನ್ನು ಹೊರತೆಗೆಯುತ್ತಲೇ ಇವೆ.
- ಫ್ರಾನ್ಸ್ ಮತ್ತು ಸ್ಪೇನ್ ದೇಶಗಳ ಗಡಿಭಾಗದಲ್ಲಿ ಹರಿಯುವ ಬಿಡಾಸೋವಾ ನದಿಯ ಮಧ್ಯಭಾಗದಲ್ಲಿರುವ ಫೆಸೆಂಟ್ ದ್ವೀಪ ಕೇವಲ ಇನ್ನೂರು ಮೀಟರ್ ಉದ್ದವಿದೆ. ಈ ಸಣ್ಣ ಭೂಭಾಗವನ್ನು ಸ್ಪಾನಿಷ್ ಭಾಷೆಯಲ್ಲಿ ಇಸ್ಲಾ ಡಿ ಲಾಸ್ ಫೈಸಾನೆಸ್ ಹಾಗೂ ಫ್ರೆಂಚ್ ಭಾಷೆಯಲ್ಲಿ ಇಲ್ ಡೆಸ್ ಫೈಸಾನ್ಸ್ ಎಂದು ಕರೆಯಲಾಗುತ್ತದೆ. ಈ ಸರೋವರ ಫೆಬ್ರವರಿ 1 ರಿಂದ ಜುಲೈ 31ವರೆಗಿನ ಆರು ತಿಂಗಳು ಸ್ಪೇನ್ ದೇಶದ ಆಡಳಿತಕ್ಕೆ ಒಳಪಟ್ಟಿದ್ದರೆ, ಆಗಸ್ಟ್ 1 ರಿಂದ ಜನವರಿ 31ವರೆಗಿನ ಮುಂದಿನ ಆರು ತಿಂಗಳು ಫ್ರಾನ್ಸ್ ದೇಶದ ಆಡಳಿತಕ್ಕೆ ಒಳಪಡುತ್ತದೆ. ಕಳೆದ 350 ವರ್ಷಗಳಿಂದ ಇದು ನಡೆದುಕೊಂಡು ಬಂದಿದೆ.
- ಕಳೆದ ಎಂಟು ತಿಂಗಳುಗಳಿಂದ ಯಾವುದೇ ರಾಕೆಟ್ ಉಡಾವಣೆ ನಡೆಸದ ಹಾಗೂ ಸತತ ಎರಡು ಪಿಎಸ್‌ಎಲ್‌ವಿ ಮಿಷನ್‌ಗಳಲ್ಲಿ ಹಿನ್ನಡೆ ಅನುಭವಿಸಿದ್ದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ, ಈಗ ಮಹತ್ವದ ಬಾಹ್ಯಾಕಾಶ ಯಾನಕ್ಕೆ ಸಿದ್ಧವಾಗಿದೆ. ದೇಶದ ಭವಿಷ್ಯದ ಯೋಜನೆಗಳಿಗೆ ದಾರಿದೀಪವಾಗಲಿರುವ ಜಿಎಸ್‌ಎಲ್‌ವಿ ರಾಕೆಟ್ ಉಡಾವಣೆಗೆ ಕ್ಷಣಗಣನೆ ಆರಂಭವಾಗಿದ್ದು, ಸೆಪ್ಟೆಂಬರ್ 4 ರಂದು ಮಧ್ಯರಾತ್ರಿ 2:55 ಗಂಟೆಗೆ ನಭಕ್ಕೆ ಚಿಮ್ಮಲಿದೆ.
- ನಮ್ಮ ಪಾದಗಳಲ್ಲಿ ಸಾವಿರಾರು ನರಗಳ ತುದಿಗಳಿರುತ್ತವೆ. ನಾವು ಬರಿಗಾಲಿನಲ್ಲಿ ದಿನಕ್ಕೆ 15 ನಿಮಿಷ ನೆಲ, ಹಸಿರು ಹುಲ್ಲು ಅಥವಾ ಮಣ್ಣಿನ ಮೇಲೆ ನಡೆದಾಗ ಆ ನರಗಳು ಜಾಗೃತಗೊಂಡು ಇಡೀ ದೇಹದ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತವೆ. ಈ ಪ್ರಕ್ರಿಯೆಯನ್ನು ಭೂಸ್ಪರ್ಶ – 'ಗ್ರೌಂಡಿಂಗ್' ಎಂದು ಕರೆಯಲಾಗುತ್ತದೆ. ಪ್ರತಿದಿನ ಕೇವಲ 15 ನಿಮಿಷ ಬರಿಗಾಲಿನಲ್ಲಿ ನಡೆಯುವುದರಿಂದ ಹೃದಯದ ಆರೋಗ್ಯಕ್ಕೆ ಅದ್ಭುತ ಪ್ರಯೋಜನಗಳು ಸಿಗುತ್ತವೆ ಎಂದು ಪ್ರಸಿದ್ಧ ಹೃದಯರೋಗ ತಜ್ಞರು ತಿಳಿಸಿದ್ದಾರೆ.

## ಓದುಗರ ಅನಿಸಿಕೆ...


ಪಟ್ಟಣ ಸಹಕಾರ ಬ್ಯಾಂಕುಗಳ
ವಾರ್ತಾ ಪತ್ರಿಕೆ

**ನಿರಾಕರಣೆ ಸಮರ್ಥನೀಯವಲ್ಲ :** ಬ್ಯಾಂಕ್ ಆಫ್ ಬರೋಡಾ ರೂ. 100 ಕೋಟಿಗಿಂತಲೂ ಅಧಿಕ ಮೊತ್ತದ ಬಾಕಿ ಉಳಿಸಿಕೊಂಡಿದ್ದ ದೊಡ್ಡ ಸಾಲಗಾರರ ಒಟ್ಟು ರೂ. 35,715 ಕೋಟಿ ಮೊತ್ತದ ಸಾಲಗಳನ್ನು ತಾಂತ್ರಿಕವಾಗಿ ಮನ್ನಾ ಮಾಡಿದಲ್ಲದೆ, ಮಾಹಿತಿ ಹಕ್ಕು ಕಾಯ್ದೆಯ ವಿನಾಯಿತಿಗಳನ್ನು ನೆಪಮಾಡಿಕೊಂಡು ಬ್ಯಾಂಕಿನ ದೊಡ್ಡ ಸುಸ್ತಿದಾರರ ಹೆಸರುಗಳನ್ನು ಬಹಿರಂಗಪಡಿಸಲು ನಿರಾಕರಿಸಿರುವುದು ಸಮರ್ಥನೀಯವಲ್ಲ.

**ಗಣೇಶ್ ಕೊಪ್ಪ, ಚಿಕ್ಕಮಗಳೂರು.**

**ಎಟಿಎಂ ಸೌಲಭ್ಯ :** ಎಚ್‌ಎಸ್‌ಬಿಸಿ ಬ್ಯಾಂಕ್ ತನ್ನ ಮುಂಬೈ ಶಾಖೆಯಲ್ಲಿ 1987ರಲ್ಲಿ ಮುಂಬೈನಲ್ಲಿ ಸ್ಥಾಪಿಸಿದ್ದೇ ದೇಶದ ಮೊದಲ ಎಟಿಎಂ ಎಂದು ತಿಳಿಯಿತು. ಇಂದು ಎಟಿಎಂಗಳಲ್ಲಿ ಹಲವು ಹೊಸ ಸೌಲಭ್ಯಗಳು ಲಭ್ಯವಾಗಿವೆ. ನಗದು ಹಿಂಪಡೆಯುವುದರ ಜೊತೆಗೆ, ಖಾತೆಯ ಬ್ಯಾಲೆನ್ಸ್ ಪರಿಶೀಲನೆ ಮತ್ತು ಮಿನಿ ಸ್ಟೇಟ್‌ಮೆಂಟ್ ಪಡೆಯುವಂತಹ ಸೇವೆಗಳೂ ದೊರೆಯುತ್ತವೆ. ಇಂದು ದೇಶದಲ್ಲಿ ಎಟಿಎಂ ಸೌಲಭ್ಯವಿಲ್ಲದ ನಗರವಿಲ್ಲ ಎನ್ನಬಹುದು. ಮಾಹಿತಿಗಾಗಿ ಧನ್ಯವಾದಗಳು.

**ಶಿವಾನಂದಪ್ಪ ಷಡಕ್ಷರಿ, ಅರಸೀಕೆರೆ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.